Regd No M 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 131] ಮಂಗಳವಾರ 6—4—48 [ಬಿಡಿ ಪ್ರತಿ 3 ಪೈ

Doc-63 T-P-2

ವಿಚಿತ್ರವಾದ ಕ್ಲಬ್‌ಗಳು

ಈ ಜಗತ್ತಿನಲ್ಲಿ ಎಂತೆಂತಹ ವಿಚಿತ್ರ ವಿಚಿತ್ರವಾದ ಕ್ಲಬ್ (ಮಂಡಲ) ಗಳು ಇವೆ ಎಂಬುದನ್ನು ಇಲ್ಲಿ ಸ್ವಲ್ಪ ನೋಡಿರಿ,—

ವಿಜಿಕ್ರ ಜನರು ವಿಚಿತ್ರ ವಿಚಾರಗಳಿಂದ ಕೂಡಿದವರಾಗಿದ್ದಾರೆ. ಒಂದೆ ವಿಚಾರದ ಜನರು ಒತ್ತಟ್ಟಿಗೆ ಸೇರುತ್ತಾರೆ. ತಮ್ಮದೇ ಆದ ಒಂದು ಮಂಡಲ ಕೂಟ ಅಥವಾ ಕ್ಲಬ್‌ನ್ನು ಮಾಡಿಕೊಳ್ಳುತ್ತಾರೆ : ಅಂತಹ ಕೆಲವು ಮಂಡಲಗಳಲ್ಲಿ ಇವು ಮುಖ್ಯವಾದವು.

ಗಿಳಿಯು ಪಂಜರದೊಳಗಿನಿಂದ 'ರಾಮ, ರಾಮ, ಯಾರು, ಯಾಕೆ ಬಂದಿ ? ಎಂದು ಮಾತಾಡಿದರೆ, ಯಾರಿಗೇನಾಯಿತೆಂದರೆ ? ಆದರೆ ಸಿಸಲಿಯ ಡೊಮಿನಿಕ್ ನೀಲ್ ಎಂಬವಳಿಗೆ ಗಿಳಿಗಳು ಹಿರಿ ಮಾತಾಡುವುದು ಸೇರುವದಿಲ್ಲವೆಂದಕ್ಕಾಗಿ ಇವಳು ಗಿಳಿಗಳಿಗೆ ಏನೂ ಕಲಿಸಬಾರದೆಂದು ಜಳವಳಿ ಮಾಡಲು ಒಂದು ಮಂಡಲ ಸ್ಥಾಪಿಸಿದಳು. ಈಗ ಅದರ 15 ನೇ ವರ್ಷ ನಡೆಯುತ್ತಿದೆ 200 ಜನ ಸದಸ್ಯರಿದ್ದಾರೆ ; ಇದಕ್ಕೆ ಅಪಕ್ವವೆಂದು ಹೆಸರಿಡಬಹುದು.

ಆದರೆ ಇದಕ್ಕೂ ಹೆಚ್ಚು ವಿಚಿತ್ರವಾದ ಮಂಡಲಗಳಿವೆ :

ನಶ್ಯ ಸೇದುವವರದೊಂದು ದೊಡ್ಡ ವರ್ಗವೇ ಬಹುಕಾಲದಿಂದ ನಡೆದ ಕೊಂಡು ಬಂದಿದೆ ; ಅಯುಸ್ಟ್ಕ್ ಎಂಬಲ್ಲಿ ಇವರ ಸಂಘವಿದೆ. ನಶ್ಯದ ಪರಿಣಾಮದಲ್ಲಿ ಪೂರ್ಣ ವಿಶ್ವಾಸವುಳ್ಳವರಾಗಿದ್ದಾರೆ.

ಲಂಡನ್ನಿನಲ್ಲಿ ಕಾಲರ್ ಹಾಕಬಾರದೆಂಬುವವರ ಮಂಡಲವೊಂದಿದೆ. ಕುತ್ತಿಗೆಯ ಕಾಲರನ್ನು ನಿಷೇಧಿಸಿ ಸಡಿಲಾದ ಉಡುಪನ್ನು ಧರಿಸಬೇಕೆಂದು ಪ್ರತಿಪಾದಿಸುವುದೇ ಇದರ ಉದ್ದೇಶ.

ಹೆಂಡತಿಗೆ ಹೆದರುವ ಗಂಡಂದಿರ ಕೂಟಗಳಿಗೂ ಇಂಗ್ಲೆಂಡಿನಲ್ಲಿ ಕಡಮೆಯಿಲ್ಲ. ಆದರೆ ಇವರು ಗುಪ್ತವಾಗಿ ಕೂಡುತ್ತಾರೆ. ಪಾರಾಗುವ ಹಾದಿ ಅಥವಾ ಹೆಂಡರನ್ನು ಹೆದರಿಸುವ ಉಪಾಯ ಹುಡುಕುವುದೇ ಇವರ ಮುಖ್ಯ ಉದ್ದೇಶ.

ಹ್ಯಾಂಪಷೈರಿನ ಶತಾಯುಷಿಗಳ ಕ್ಲಬ್ಬೆಷ್ಟೂ ಆಪ್ತವಾನಕರವಾದು

ನೈಜಾಮರಿಗೆ ರೂ. 90 ಲಕ್ಷ

ಭಾರತ ಸರಕಾರ ಪ್ರವೇಶಿಸಲೇಬೇಕು

ಶ್ರೀ ಪಾಂಡುರಂಗರಾಯರ ಹೇಳಿಕೆ

ಮೈಸೂರು, ಮಾ ೬

ಹೈದರಾಬಾದಿನದು ಜಟಿಲ ಸಮಸ್ಯೆ ವಿಶ್ವವೇ ತನ್ನ ದೃಷ್ಟಿಯನ್ನು ಹೈದರಾಬಾದಿನತ್ತ ಹೊರಳಿಸ ಬೇಕು ಎಂದು ಹೇಳಿದರೆ ಅತಿಶಯವಿಲ್ಲ. ಧರ್ಮ ಬುದ್ಧಿಯಿಂದ ಭಾರತ ಪ್ರಭುತ್ವ ಹೈದರಾಬಾದ್ ವಿಷಯದಲ್ಲಿ ಪ್ರವೇಶ ಮಾಡಬೇಕು: ನಿಜಾಂ ನಿರಂಕುಶ ಪ್ರಭುತ್ವ ನಿರ್ನಾಮ ಮಾಡಲು ಇರುವುದೊಂದೇ ಮಾರ್ಗ

ಹೈದರಾಬಾದ್ ಹಿಂದೂಗಳು ಮುಸ್ಲಿಂರನ್ನು ಸೌಜನ್ಯದಿಂದ ಒಲಿಸಿಕೊಳ್ಳಬೇಕು. ಆದರೆ ನಮ್ಮ ಸ್ವಯಂ ಸೇವಕರಲ್ಲಿ ಅಷ್ಟು ಸೌಜನ್ಯತೆ ಇಲ್ಲ. ಆದರಿಂದಲೇ ನಮ್ಮ ಗುರಿ ಮುಟ್ಟಲು ದಿನದಿನಗಳು ಕಳೆಯುತ್ತಿರುವುದು

ಸರ್ವವೂ ತನ್ನದೇ ಎಂದು ರಾಜಮದಿಸಕೂಡದು. ಅಧಿಕಾರ ಪಡೆದವು ಎಂದು ಪ್ರಜೆಗಳು ಸ್ವಾರ್ಥಿಗಳಾಗಕೂಡದು. ಗಾಂಧೀಜೀ ಆಕರ್ಷಕ ರಾಮರಾಜ್ಯ ಇದೇ. ನಿಜಾಂ ಪ್ರಭುಗಳನ್ನು ಹೈದರಾಬಾದ್ ಜನವೃಂದ ಕೋರುತ್ತಿರುವುದಾದೂ ಇದನ್ನೇ

— ಹೀಗೆಂದು ಹೈದರಾಬಾದು ಸತ್ಯಾಗ್ರಹ ಸಂಚಾಲಕ ಶ್ರೀ ಪಾಂಡುರಂಗರಾವ್ ಹೈದರಾಬಾದ್ ಸತ್ಯಾಗ್ರಹಕ್ಕೆ ನೆರವು ಕೋರುತ್ತಾ ಮಾಡಿದ ಭಾಷಣದಲ್ಲಿ ತಿಳಿಸಿದರು.

ತಮ್ಮ ಭಾಷಣವನ್ನು ಮುಂದುವರಿಸುತ್ತಾ, ಅವರು,

ಹೈದರಾಬಾದು ಕೋರಾಟಕ್ಕೂ ಮೈಸೂರಿನಲ್ಲಿ ಜರುಗಿದ ಹೋರಾಟ

ನೈಜಾಮರಿಗೆ ರೂ. 90 ಲಕ್ಷ

ಹೈದರಾಬಾದು ಏ 4— 2 ದಿನಗಳ ಹಿಂದೆ ನೈಜಾಮರಿಗೆ ಭಾರತ ಸರಕಾರದಿಂದ ರೂ 90 ಲಕ್ಷ (ನೂರು ರೂ ಪಾಯಿ ನೋಟುಗಳು) ಬಂದಿತೆಂದೂ ಇದು 1946 ರಲ್ಲಿ ಸಾವಿರ, ಐನೂರು ರೂಪಾಯಿ ನೋಟುಗಳು ಪಜಾ ಆದ ಕಾಲದಿಂದ ಕೊಡಬೇಕಾಗಿತ್ತೆಂದೂ ಹೇಳಲಾಗಿದೆ ; 60 ಲಕ್ಷ ವಿಮಾನದಲ್ಲೂ ಬಾಕಿ ರೈಲಿನಲ್ಲೂ ಬಂದಿತು

—

ಬೆಂಗಳೂರು ಏ 5— ಅಠಾರಾ ಕಛೇರಿಯ ಬಳಿ ಕಾಗದದ ಕಾರ್ಖಾನೆಗೆ ಕೆಲಸಗಾರರು ಸತ್ಯಾಗ್ರಹ ಪ್ರಾರಂಭಿಸಿದರು. ಸ್ತ್ರೀಯರು ಸಚಿವರ ಕಾಲು ಹಿಡಿದು ಬೇಡಿದರು. ಕೆಲಸಕ್ಕೆ ಹಿಂದಿರುಗಿದ ತಕ್ಷಣವೇ ಎಲ್ಲಾ ಸಹಾಯ ನೀಡುವುದಾಗಿ ಸಚಿವರು ಭರವಸೆಯಿತ್ತರೆಂದು ತಿಳಿಯುಬಂದಿದೆ

ಟೆಹರಾನ್— ಪರ್ಷಿಯಾ ಗಡಿಯಲ್ಲಿನ ನದಿಯ ನೀರನ್ನು ಅಫ್ಘನ್ನರು ಹಾಳು ಮಾಡುತ್ತಾ ಸಿಸ್ತಾನ್ ಪ್ರಾಂತ್ಯದ ಅರ್ಧ ಮಿಲಿಯ ಜನರಿಗೆ ನಿರಿಲ್ಲದಂತಾಗಿದೆಯೆಂದು ಪರ್ಷಿಯಾ ಸರಕಾರದ ಹೇಳಿಕೆ.

ರೋಂ— 25 ಸಾವಿರ ಇಟಾಲಿಯನ್ ಸೋಲ್ಜರುಗಳ ಭಾರಿ ಪೆರೇಡು ನಡೆಯಿತು

ಗುಲಬರ್ಗಾದಲ್ಲಿ ಒಂದು ಬಾಂಬು ಕಾರ್ಖಾನೆ ವತ್ತೆಯಾಗಿದೆ

ದಲ್ಲ. ಪ್ರತಿಯೊಬ್ಬ ಸದಸ್ಯನೂ ನೂರು ವರ್ಷ ಬಾಳಿದವನೇ ಇರಬೇಕೆಂಬ ನಿರ್ಬಂಧವಿಲ್ಲ. ಆದರೆ ತಾನು ನೂರು ವರ್ಷ ಬಾಳುವೆನೆಂಬ ಮಹತ್ವಾಕಾಂಕ್ಷೆಯುಳ್ಳವನಾಗಿರಬೇಕು.

ಲಂಡನ್ನಿನಲ್ಲಿ ಒಂದು ಕ್ಲಬ್ ಇದೆ. ಅಲ್ಲಿ ನಗುವುದಕ್ಕೆ ದಂಡ ವಿಧಿಸುವರು. ಬೇಕಾದವರು ಸದಸ್ಯರಾಗಬಹುದು. ಅದರ ಸಭೆ ಕೂಡಿತಾಗ, ಸದಸ್ಯರು ನಾನಾ ವಿನೋದಪೂರ್ಣ ಸಂಗತಿಗಳನ್ನು ಹೇಳುವರು. ಆಗ ನಕ್ಕವರಿಗೆಲ್ಲಾ ಒಂದು ಪೆನ್ಸು ದಂಡ ಹಾಕುವರು. ಹೀಗೆ ಕೂಡಿದ ದಂಡಹಣವನ್ನು ಧರ್ಮಾರ್ಥ ಕಾರ್ಯಕ್ಕೆ ಕೊಡುವರು.

ಇದಕ್ಕೂ ಭೀಕರವಾದ ಮಂಡಲವೊಂದಿದೆ. ಸಾಯುವ ಮುಂಚೆ ಹೂಳುವ ಮಂಡಲವೆಂದು ಅದರ ಹೆಸರು. ಮರಣ ಪರೀಕ್ಷೆ ಮಾಡುವುದಕ್ಕೆ 11 ವಿಧಗಳನ್ನು ಶೋಧಿಸಿದ್ದಾರೆ ಮರಣ ಪೂರ್ವ ದಫನ್ ಮಾಡುವುದನ್ನು ನೀವು ನೇಬದಿದ್ದರೆ ಈ ಮಂಡಲದ ಸದಸ್ಯರು ಜೀವಂತ ಜನರನ್ನು ಹೂಳಿದ ಬಗ್ಗೆ ಭಯಂಕರ ಪುರಾವೆ ಕೊಡಲು ಸಿದ್ಧರಿದ್ದಾರೆ,

ಕೊನೆಯುದಾಗಿ ಸುಳ್ಳುಗಾರರ ಸಂಘವೂ ಇದೆ. (ಲೊ)

ಗೋಧ್ರಾ ಗಲಭೆ

ಕಳೆದ ತಾ || 26 ರಲ್ಲಿ ನಡೆದ ಕೋಮುವರ ಗಲಭೆ ಸಂಬಂಧವಾಗಿ 16 ಜನರು ಸತ್ತರೆಂದೂ, ಬೆಂಕಿ ಹರಡಿ ನಾದರಮನೆಗಳವರೆಗೆ ನಾಶವಾದವೆಂದೂ ಹೇಳಲಾಗಿದೆ

ಕ್ಕೂ ಭೂಮ್ಯಾಕಾಶ ಅಂತರವಿದೆ ನಮ್ಮವರು ಸೆರೆಮನೆ ಸೇರಿದರೆ ವಾಪಸಾಗುತ್ತಿದ್ದರು ನಮ್ಮಲ್ಲಿ ಹಾಗಲ್ಲ ಸೆರೆಗೆ ಹೋದವರು ವಾಪಸೇ ಬರುವುದಿಲ್ಲ 15 ಸಾವಿರ ಮಂದಿ ಸ್ವಯಂಸೇವಕರು ನಿಜಾಂ ಕಾರಾಗೃಹದಲ್ಲಿ ಕೊಳೆಯುತ್ತಿರುವರು

ಹದಗಟ್ಟಿ ಆಡಳಿತದ ದಬ್ಬಾಳಿಕೆಯಿಂದ ಹೈದರಾಬಾದ್ ಗ್ರಾಮಗಳಲ್ಲಿ ನವಚೇತನ ಉಂಟಾಗಿದೆ ಆದರೆ ನೈಸೂರು ಮಟ್ಟದ ಪ್ರಗತಿ ಪಡೆಯಬೇಕಾದರೆ ಮೂರು ಶತಮಾನಗಳಾದರೂ ಬೇಕು

ಗಡಿಘಟನೆಗಳು ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವುದು ಕಾಲಭಾಗ ಮಾತ್ರ ನಿಜಾಂ ಪ್ರಭುತ್ವ ಕೊಡುವ ಉತ್ತರ ಎಂದರೆ ಗುಂಡಿನೇಟು ಮನೆಗೆ ಬೆಂಕಿ ಇತ್ಯಾದಿ ಲಂಚ ಅಗಾಧವಿದೆ

— ಎಂದು ನುಡಿದರು.

ಗಂಗಾಜಲ

ಹಿಂದೂ ಧರ್ಮಶಾಸ್ತ್ರಗಳಲ್ಲಿ ಗವತೀ ಭಾಗೀರಥಿಯ ಜಲದ ಮಹಾ ಹಿಮೆಯು ಕೀರ್ತಿಸಲ್ಪಟ್ಟಿದೆಯಲ್ಲದೆ ದರಲ್ಲಿ ಸ್ನಾನಮಾಡುವುದರ ಆಥವಾ ಾನಮಾಡುವುದರ ದೊಡ್ಡ ಮಹಾತ್ಮ್ಯ ರ್ಣಿತವಾಗಿದೆ ಗಂಗಾಜಲದ ಒಂ ು ತೊಟ್ಟನ್ನಾದರೂ ಬೇರೆ ಜಲದಲ್ಲಿ ಾಕುವುದಾದರೆ, ಆ ಸಮಸ್ತ ಜಲವೂ ಪವಿತ್ರವಾಗುವುದೆಂದು ಹೇಳಿದೆ ಇದರ ಒಂದು ಬಿಂದು ಜಲದಲ್ಲಿ ಅಷ್ಟು ಶಕ್ತಿ ಇರುವಾಗ ಆ ಜಲದ ಸ್ಪರ್ಶದಿಂದಲೂ ಮಜ್ಜನದಿಂದಲೂ ಪಾನದಿಂದಲೂ ಮನುಷ್ಯನಿಗೆ ಅಲಭ್ಯವಾದುದೇನಿದ್ದೀತು ? ವೇದ ಶಾಸ್ತ್ರ ಇತಿಹಾಸ ಇವುಗಳಲ್ಲಿಯೂ ಗಂಗಾ ಮಹಿಮೆಯ ವಿಷಯವು ಧಾರಾಳವಾಗಿ ಬಂದಿದೆ. ಯಾವುದರಿಂದ ಮನುಷ್ಯನು ತನ್ನ ಅಂತಃಕರಣವನ್ನು ವಿಶುದ್ಧವಾದ ಸಾತ್ವಿಕ ಜೀವನದಿಂದ ಎಮಲಗೊಳಿಸಿಕೊಂಡು, ಅಂತಃಸ್ಥವೂ ಪವನ್ನು ಪ್ರತಿಬಿಂಬಿಸಿಕೊಳ್ಳುವುದರಲ್ಲಿ ಸಮರ್ಥನಾಗುವನೊ ಆ ಜೀವನವನ್ನೀಯುವ ಅತ್ಯಧಿಕ ಶಕ್ತಿಯು ಗಂಗಾಜಲದಲ್ಲಿಯೇ ಇವೆಯೆಂದು ಧಾರ್ಮಿಕ್ಕತತ್ವವೇತ್ತರ ಕಥನವಿದೆ.

ಧರ್ಮಶಾಸ್ತ್ರಗಳಲ್ಲದೆ ಆಯುರ್ವೇದ ದೃಷ್ಟಿಯಿಂದಲೂ ಗಂಗಾಜಲದಲ್ಲಿ ಕಂಡುಬರುವ ಗುಣಗಳನ್ನು ನೋಡಿದರೆ ಆಶ್ಚರ್ಯಚಕಿತರಾಗಬೇಕಾಗುವದು. ಇಂದಿಗೆ ಎರಡು ಸಹಸ್ರ ವರ್ಷಗಳ ಹಿಂದಿನ ವನಾದ ಚಾಕನು ಗಂಗಾಜಲವು ಪಥ್ಯವೆಂದು ಒಪ್ಪಿರುವನು. ಕ್ರಿ. ಶ. 1060 ರ ಸುಮಾರಿನಲ್ಲಿದ್ದ ಚಕ್ರಪಾಣಿದತ್ತನೂ ಇದನ್ನು ಸಮರ್ಥಿಸಿರುವನು. ಭಂಡಾರ್ಕರ್ ಓರಿಯಂಟಲ್ ಇನ್ಸ್ಟಿಟ್ಯೂಟ್ ನಲ್ಲಿರುವ ಹಸ್ತಲಿಖಿತ ಗ್ರಂಥವೊಂದರಲ್ಲಿ ಗಂಗಾಜಲದ ಉಲ್ಲೇಖವಿದೆ. ಅದರಲ್ಲಿ ಈ ಜಲದ ಉಪಯೋಗತೆಯನ್ನು ತಿಳಿಸುತ್ತಾ— ಗಂಗಾಜಲವು ಶ್ವೇತವೂ, ಸ್ವಾದುವೂ, ಸ್ವಚ್ಛವೂ, ಅತ್ಯಂತ ರುಚಿಕರವೂ, ಪಥ್ಯವೂ ಆಹಾರಿಬೇಯಿಸಲು ಯೋಗ್ಯವೂ ಪಾಚನ ಶಕ್ತಿ ಹೆಚ್ಚಿಸುವುದೂ ಸರ್ವ ಪಾಪ ಪರಿಹಾರಕವೂ ನೀರಡಿಕೆಯನ್ನು ಅಡಗಿಸುವುದೂ ಮತ್ತು ಬುದ್ಧಿಯನ್ನು ತೀವ್ರಗೊಳಿಸುವಂಥಹುದೂ ಇರುವುದು— ಎಂದು ಬರೆದಿದೆ.

ಇಷ್ಟುಮಾತ್ರವಲ್ಲದೆ ನಮ್ಮಲ್ಲಿ ಗಂಗಾಜಲದ ಆರೋಗ್ಯ ಸಂಬಂಧಿ ಗುಣಗಳನ್ನು ಇನ್ನೂ ಒತ್ತಿಹೇಳಲಾಗಿದೆ. ಈಗಂತೂ ವಿಜ್ಞಾನದ ಕೃಪೆಯಿಂದ ಗಂಗಾಜಲದ ಮಹತ್ವವು ಭ್ರಾಂತದಿಂದ ಹೊರಗೂ ಪ್ರಕಾಶಿತವಾಗಿ ಹೋಗಿದೆ. ಈ ಜಲದ ಗುಣಗಳ ಮೇಲೆ ಮುಗ್ಧರಾಗಿ ವಿದೇಶಿಗಳೂ ಇದನ್ನು ಆತ್ಮಸಾತ್ ಮಾಡಿಕೊಳ್ಳಲು ಪ್ರಾರಂಭಿಸಿರುವರು.

[ಸಶೇಷ

ವುಡ್ ಲ್ಯಾಂಡ್ಸ್

From 2–4–48

MYSTERY MOUNTAIN

with Ken Mayward
with his wonderful horse Tarzan

ಮಿಸ್ಟರಿ ಮೌಂಟೆ

15 ಭಾಗಗಳ ಸೀರಿಯಲ್

ಪ್ರತಿ ದಿನ 3 ಆಟಿಗಳು

ಮೈಸೂರು ಸಂಸ್ಥಾನದಲ್ಲೇ ಪ್ರಥಮ ಪ್ರದರ್ಶನ

At Opera

2–4–48 ರಿಂದ

ಕಣ್ಣಪ್ಪ, ಲೀಲಾ, ಕೃಷ್ಣಪ್ಪ, ಮಧುರಂ ಪಾತ್ರವಹಿಸಿರುವ

ದೇವದಾಸಿ

[ತಮಿಳು]

ಪ್ರತಿ ದಿನ ಮೂರು ಆಟಗಳು

Save the Cow

ಗೋ ವಧೆ ನಿಲ್ಲಲಿ

Good Printing

L. N. Press

Sivarampet, Mysore

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

"ಪ್ರಬೋಧ" ಪುಟದಿಂದೊಡಗೂಡಿದ ಸೋಮವಾರ ಸಂಚಿಕೆ ವಾರ್ಷಿಕಚಂದಾ ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1–13–9

ಶಕ್ತಿಸುಧಾ

ಶಕ್ತಿಹೀನತೆಗೆ ಸಂಜೀವನ

Edited, Printed and Published by M S Krishna Rao at the Satyavadi Press, Chamaraj Agrahar, Mysore



ಹೊಸ ರೀತಿಯ ರೈಲ್ವೆ ಇಂಜನ್ನುಗಳು

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದುದು. ಸ್ಪೇನಿನ ಕೇಸರಿ ಗಿಡಗಳಲ್ಲಿಯ ಹೂಗಳಿಂದ ಆರಿಸಿ ತೆಗೆದುದಾಗಿದೆ. ನಮ್ಮಿಂದ ಸ್ಪೆಷಲ್ಲಾಗಿ ಅಮದು ಮಾಡಲ್ಪಟ್ಟಿರತಕ್ಕದ್ದು. ಬಹು ಹೊಳಪಿನಿಂದಲೂ ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಆಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ. ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾಗಿದೆ. 1 ತೋಲಾ, 5 ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ.

ವಲ್ಲಭದಾಸ್ ತೇಜ್ ಪಾಲ್

ಲಿಳಿ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.